ಮಾಡಬೇಕಾಗುತ್ತದೆ. ಇದು ಪದ್ಧತಿ ಇದೆ. ಇದು ತಪ್ಪಿದರೆ ನಾಳೆ ಅಧ್ಯಕ್ಷರು ಹೇಳಬಹುದು, ನೀವು ಮಾಡಿಲ್ಲ ಅಂತ ಅವರು ಬೇರೆ ವಿಷಯಕ್ಕೆ ಹೋಗುತ್ತಾರೆ.

ಶ್ರೀ ವಾಟಾಳ್ ನಾಗರಾಜ್ : ಪದ್ಧತಿ ಬಗ್ಗೆ ಪಾಪ, ಪದ್ಧತಿ ನನಗೆ ಗೊತ್ತಿದೆ. ನಾನು ವಿರೋಧಪಕ್ಷದ ನಾಯಕರನ್ನು ಪದ್ಧತಿ ಬಗ್ಗೆ ತಿಳಿವಳಿಕೆ ಕೇಳುತ್ತಾ ಇಲ್ಲ. ಪದ್ಧತಿ ನನಗೆ ಗೊತ್ತಿದೆ. ನಾನು ಪ್ರಶ್ನೋತ್ತರ ಕಾಲ ಪ್ರಾರಂಭವಾಗುವ ಮುಂಚೆ ಇದನ್ನು ಪ್ರಾರಂಭ ಮಾಡಿದೆ, ಪ್ರಶ್ನೋತ್ತರವನ್ನು ಬದಿಗೊತ್ತಿ ನಾವು ಸದನವನ್ನು ಯಾವಾಗ ಕರೆಯಬೇಕೆಂದು ನಿರ್ದಿಷ್ಟವಾದ ನಿಲುವು ಬೇಕಲ್ಲ ನಮಗೆ. ಆಯವ್ಯ ಮಂಡನೆ ಎಂದು ಹೇಳಿದರು, ಯಾವಾಗ ಮಂಡನೆ ಮಾಡಿದ್ದು, ಚರ್ಚೆ ಯಾವಾಗ, ಬೇಡಿಕೆಗಳನ್ನು ನಾವು ಯಾವಾಗ ಕೊಡಬೇಕು, ಅದರ ಬಗ್ಗೆ ಸರ್ಕಾರದ ನಿಲುವೇನು ಎಂದು ಹೇಳಿ.

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೆ, ವಾಟಾಳ್ನಾಗರಾಜ್ರವರು ಬಹಳ ಹಿರಿಯ ಸದಸ್ಯರು ಅವರು ಏನು ಪ್ರಸ್ತಾಪಿಸಿದ್ದಾರೆ ಅದು ಬಹಳ ಗಂಭೀರವಾದ ವಿಷಯ, ಅದರ ಬಗ್ಗೆ ನಮ್ಮ ಪ್ರಶ್ನೆಯೇ ಇಲ್ಲ. ನಮ್ಮ ಸಂಪೂರ್ಣ ಬೆಂಬಲ ಅವರಿಗಿದೆ. ಇದನ್ನು ಈಗ ತೆಗೆದುಕೊಳ್ಳಿ. ನಂತರ ಬೇಕಾದರೆ ನಾನು ಪ್ರಸ್ತಾಪಿಸುತ್ತೇನೆ. ಆದರೆ ಸರ್ಕಾರ, ಸಬ್ಜೆಕ್ಟ್ ಕಮಿಟಿ ಏನು ಮಾಡಿದೆ ಅದರಿಂದ ಒಳ್ಳೆಯ ಕೆಲಸವಾಗಿದೆ. ಅದರ ಬಗ್ಗೆ ಭಿನ್ನಾಭಿಪ್ರಾಯವಿಲ್ಲ. ಆದರೆ ವಿಷಯ ಸಮಿತಿಗಳ ವರದಿ ಬಂದಿಲ್ಲ ಎಂದು ಅದರ ನೆಪದಲ್ಲಿ ಈ ಸದನವನ್ನು ನಾವು ಕರೆದಿಲ್ಲ, ನಾಲ್ಕೈದು ತಿಂಗಳಿಂದ ಎಂದರೆ ತಾವು ವಿವರಣೆ ಕೊಡಬೇಕಾಗುತ್ತದೆ. ಆಗ 11 ದಿವಸ ಸೆಶನ್ ಕರೆದಿರಿ, ಹಲವಾರು ಸಮಸ್ಯೆಗಳಿವೆ, ಯಾವ ಸಮಸ್ಯೆ ತೆಗೆದುಕೊಳ್ಳಬೇಕು, ಜನರ ಪರವಾಗಿ ನಾವು ಹೇಳಬೇಕು ಇಲ್ಲಿ. ನಾವು ಎಲ್ಲರೂ ನಗೆಪಾಟಲಾಗಿದ್ದೇವೆ, ಹಾಗ್ಹಾಗಿ ಸರ್ಕಾರ ಹೇಳಬೇಕಾಗುತ್ತದೆ, ಸೆಶನ್ ಕರೆಯಲಿಕ್ಕೆ ಏನು ಕಷ್ಟ, ತೊಂದರೆ ಮತ್ತು ಎಂದು ಹೇಳಬೇಕಾಗುತ್ತದೆ. ಆದ್ದರಿಂದ ಇದನ್ನು ಮೊದಲು ತೆಗೆದುಕೊಳ್ಳಲು ಅನಂತರ ನಿಲುವಳಿ ಸೂಚನೆ ತೆಗೆದುಕೊಳ್ಳಲು ನಮ್ಮ ಅಭ್ಯಂತರ ಇಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ಒಂದು ನಿಲುವಳಿ ಸೂಚನೆ ನಾವು ಕಳಿಸಿಕೊಟ್ಟಾಗ ವಾಟಾಳ್ನಾಗರಾಜ್ರವರು ಪ್ರಸ್ತಾಪಿಸಿದ್ದನ್ನು ಈಗಲೇ ತೆಗೆದುಕೊಳ್ಳಬೇಕೆಂದರೆ ಅದಕ್ಕೆ ನಮ್ಮ ಅಭ್ಯಂತರ ಇಲ್ಲ. ಒಂದು ನಿಲುವಳಿ ಸೂಚನೆ ಮಂಡನೆ ಮಾಡಿದ ಮೇಲೆ ಅಧ್ಯಕ್ಷರು 60ನೇ ನಿಯಮದ ಮೇರೆಗೆ ಒಪ್ಪಿಗೆ ಕೊಟ್ಟರೆ ಮತ್ತು ಚರ್ಚಿಸಲು ಉದ್ದೇಶಿಸಿರುವ ವಿಷಯಗಳು ಕ್ರಮಬದ್ಧವಾಗಿವೆ ಎಂದು ಅಭಿಪ್ರಾಯಪಟ್ಟರೆ ಪ್ರಶ್ನೋತ್ತರಗಳ ತರುವಾಯ ಅಥವಾ ಕಾರ್ಯಕ್ರಮಗಳ ಪಟ್ಟಿಯಲ್ಲಿರುವ ಇತರ ವಿಷಯಗಳನ್ನು ಪ್ರಾರಂಭಿಸುವ ಮುಂಚೆ ಸಂಬಂಧಪಟ್ಟ ಸದಸ್ಯರ ಹೆಸರನ್ನು ಕರೆಯಬಹುದು, ಅಂತಹ ಸದಸ್ಯರು ತಮ್ಮ ಸ್ಥಾನದಲ್ಲಿ ಎದ್ದು ನಿಂತು ನಿಲುವಳಿ ಸೂಚನೆ ಮಂಡಿಸಲು ಅನುಮತಿ ಕೇಳಬೇಕಾದ್ದು ಇದು ರೂಲ್ಸ್, ನಾವು ಫಾಲೋ ಮಾಡಬೇಕಾದದ್ದು. ದಯಮಾಡಿ ನಿಲುವಳಿ ಸೂಚನೆ ಆಗಸ್ಟ್ 15ರ ಘಟನೆ ಬಗ್ಗೆ ನಾವು ನೋಟಿಸ್ ಕೊಟ್ಟಿದ್ದೇವೆ, ಯಾರದಾದರೂ ಆಡ್ಜೆಸ್ಟ್ ಮಾಡಿ. ಅದರ ಬಗ್ಗೆ ತಾವು ತೀರ್ಮಾನ ತೆಗೆದುಕೊಳ್ಳಿ. ಬಹಳ ಗಂಭೀರವಾದ ವಾತಾವರಣ ಇದೆ. ಸದನ ಯಾವಾಗಬೇಕೋ ಆಗ ಸೇರುತ್ತೆ, ಯಾರೂ ಹೇಳೋರು ಕೇಳೋರು ಇಲ್ಲ, ಅದರ ಬಗ್ಗೆನೂ ಸರ್ಕಾರ ಉತ್ತರಿಸಬೇಕಾಗುತ್ತದೆ.

ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಿದ ವಿಷಯಗಳು

1. ವಿಧಾನ ಸಭೆಯ ವಿಷಯ ಸಮಿತಿಗಳ ವರದಿ ಬಗ್ಗೆ

+ ಶ್ರೀ ಡಿ.ಬಿ. ಚಂದ್ರೇಗೌಡ : ಶ್ರೀ ವಾಟಾಳ್ ನಾಗರಾಜ್ ಅವರು ಎತ್ತಿದ್ದು ಪ್ರಸ್ತುತವಾಗುತ್ತದೆ. ಈ ದಿವಸ ನಾವು ವಿಷಯ ಸಮಿತಿಗಳ ವರದಿಗಳನ್ನು ಸಭೆಯಲ್ಲಿ

ಮಂಡಿಸಿದ್ದೇವೆ. ಡಿಬೆಟ್ ಮೇಲೆ ಜನರಲ್ ಡಿಸ್ಕಷನ್ ಆದ ಮೇಲೆ ವಿಷಯವನ್ನು ವಿಷಯ ಸಮಿತಿಗಳಿಗೆ ವರ್ಗಾವಣೆ ಮಾಡಿದ ಮೇಲೆ 4ವಾರದಲ್ಲಿ ಇದರ ವರದಿಯನ್ನು ಸದನಕ್ಕೆ ಕೊಡಬೇಕೆಂದು ಅದರಲ್ಲಿ ಇದೆ. ಸದನ ಕರೆಯದೇ ಇದ್ದರೆ ನಾವೇನು ಮಾಡುವುದು? ಇಲ್ಲಿ ಪ್ರಶ್ನೆ ಇಷ್ಟೆ. ಸದನ ಕರೆಯುವುದಕ್ಕೆ ಸರಕಾರ ಮನಸ್ಸು ಮಾಡದಿದ್ದರೆ ನಾವೇನು ಮಾಡುವುದು. 1 ತಿಂಗಳ ಒಳಗೆ ವರದಿಯನ್ನು ಈ ಸದನಕ್ಕೆ ಕೊಡಬೇಕು. ಆದರೆ ಅದನ್ನು ಕೊಡುವುದಕ್ಕೆ ಸಾಧ್ಯವಾಗಲಿಲ್ಲವೆಂದರೆ ಇದರ ಅರ್ಥ ಏನಾಗುತ್ತದೆ. ಸದನ ಸಮಿತಿಯನ್ನು ನೇಮಕ ಮಾಡಿದ್ದರಿಂದ ಇದರ ಪೂರ್ಣ ಲಾಭವನ್ನು ತೆಗೆದುಕೊಂಡು ಸರಕಾರ ಶಾಸನ ಸಭೆಯನ್ನೇ ಅದರ ಕತ್ತು ಹಿಸುಕತಕ್ಕಂತಹ ಕೆಲಸ ಮಾಡಿದೆ. ಇದು ಒಂದು. ಎರಡನೆಯದು ಉತ್ತರ ಹೇಳುವಾಗ ಅವರು ಯಾರೂ ವರದಿ ಕೊಡಲಿಲ್ಲವೆಂದು ನಮಗೆ ಹೇಳಿಬಿಟ್ಟರೆ ನಾವು ವಿಧಿಯಿಲ್ಲದೆ ತಮಗೇ ವರದಿಯನ್ನು ತಂದು ಒಪ್ಪಿಸಬೇಕಾಗುತ್ತದೆ. ಆದರೆ ನಾವು ಅಂದು ವಿಷಯ ಸಮಿತಿ ಮಾಡಿದಾಗ ಮಾಡಿದಂತಹ ತೀರ್ಮಾನಗಳೇನು ಇವೆ ಯಾವ ನಿಯಮಗಳ ಮೇಲೆ ವಿಷಯ ಸಮಿತಿಗಳನ್ನು ಮಾಡಿದ್ದೇವೆ ಅದರ ಬಗ್ಗೆ ವಿಚಾರ ಮಾಡಬೇಕಾಗುತ್ತದೆ. ಇಷ್ಟೇ ಅಲ್ಲ ನಾವು ಇದರ ಬಗ್ಗೆ ತೋಟಸಭಾಧ್ಯಕ್ಷರೊಂದಿಗೆ, ಪಶ್ಚಿಮ ಬಂಗಾಳ, ಕೇರಳಕ್ಕೆ ಹೋಗಿ ಅಲ್ಲಿ ಚರ್ಚೆ ಮಾಡಿದ್ದೇವೆ. ಎಲ್ಲಾ ಕಡೆಯಲ್ಲೂ ಇರತಕ್ಕಂತಹ ಪರಿಸ್ಥಿತಿಯನ್ನು ತಮ್ಮ ಗಮನಕ್ಕೆ ತಂದಿದ್ದೇವೆ. ಆ ದಿವಸ ಚರ್ಚೆ ಮಾಡಿದಾಗ ತಾವು ಅಲ್ಲೇ ಇದ್ದಿರಿ. ಇಲ್ಲಿರುವ ಪ್ರಶ್ನೆ ಏನೆಂದರೆ, ಇದು ಕೊನೇ ಅಧಿವೇಶನ. ಅಧಿವೇಶನದಲ್ಲಿ ಶಾಸನ ಸಭೆಗೆ ಎಷ್ಟು ಗೌರವ ಸಲ್ಲಬೇಕು, ಎಷ್ಟು ರೀತಿಯ ಆಯಾಮ ಇದಕ್ಕೆ ಸಿಗಬೇಕು ಅದು ಸಿಕ್ಕದೇ ಇರತಕ್ಕಂತಹ ಒಂದು ಪದ್ಧತಿ ಕಾರಣವಾಗಿದೆ ಎನ್ನುವಂತಹ. ಆಪಾದನೆ ಬರಬಾರದೆಂಬುದು ನಮ್ಮ ಉದ್ದೇಶ. ಈ ಉದ್ದೇಶ ಸಫಲವಾಗಬೇಕಾದರೆ ತಮ್ಮಿಂದ ಒಂದು ನಿರ್ದೇಶನ ಬೇಕಾಗುತ್ತದೆ. ಕಾನ್ಸಿಟಿಟ್ಯೂಷನಲ್ ಆಬ್ಲಿಗೇಷನ್ ಇದೆ. ಒಂದು ಅಧಿವೇಶನ ಮತ್ತೊಂದು ಅಧಿವೇಶನ ಮಧ್ಯೆ 6 ತಿಂಗಳ ಅವಧಿ ಇರಬೇಕೆಂದು ಕಾನ್ಸಿಟಿಟ್ಯೂಷನಲ್ ಆಬ್ಲಿಗೇಷನ್ ಇದೆ. ಇಲ್ಲದಿದ್ದರೆ ನಾವು ನೇರವಾಗಿ ಚುನಾವಣೆಗೆ ಹೋಗುತ್ತಿದ್ದೆವು. ಇದು ನಾನು ಸರಕಾರದ ಮೇಲೆ ಮಾಡತಕ್ಕಂತಹ ಆಪಾದನೆ. ಅವರು 100ದಿವಸ ಶಾಸನ ಸಭೆ ಕರೆಯುತ್ತೇವೆಂದು ಹೇಳಿದರು. 100 ದಿವಸವಾದ ಮೇಲೆ ಕರೆಯುವುದು ಇರಲಿ, ಈಗ 200 ದಿವಸದ ಕಾರ್ಯಕ್ರಮ ಕೊಟ್ಟ ಹಾಗೆ ನಮಗೆ 200 ದಿವಸವಾದ ಮೇಲೆ ಶಾಸನ ಸಭೆ ಕರೆಯತಕ್ಕಂಥಾದ್ದು ಒಂದು ಕಾರ್ಯಕ್ರಮ. ಇದು ಅನಿವಾರ್ಯ.

ಕಾನ್ಸಿಟಿಟ್ಯೂಷನ್ ಫೌಂಡಿಂಗ್ ಫಾದರ್ಸ್ ಆವತ್ತು ಆಲೋಚನೆ ಮಾಡದಿದ್ದರೆ ಬಹುಶಃ ಇವತ್ತು ಅಧಿವೇಶನ ಕರೆಯುತ್ತಿರಲಿಲ್ಲ. ಇದು ಆಗಬಾರದು. ಈ ಆಪಾದನೆಯಿಂದ ತಾವು ನಾವು ಮುಕ್ತರಾಗಬೇಕು. ಸಮಿತಿಯಲ್ಲಿ ಕೆಲಸ ಮಾಡತಕ್ಕಂತಹವರು ಈ ಸದನಕ್ಕೆ ಜವಾಬ್ದಾರಿ ಇದೆ ಎನ್ನುವುದನ್ನು ಈ ಸದನದ ಮೂಲಕ ಸಾರ್ವಜನಿಕರಿಗೆ ತಿಳುವಳಿಕೆ ಹೇಳಬೇಕಾಗುತ್ತದೆ. ಇಲ್ಲದಿದ್ದರೆ ಯಾವ ಉದ್ದೇಶದಿಂದ ಮಾಡಿದ್ದೇವೋ ಅದು ಈಡೇರುವುದಿಲ್ಲ. ಈ ಸಮಿತಿಗಳು ಸಾಕಷ್ಟು ಕೆಲಸ ಮಾಡಿವೆ. ಇದು ನಿರ್ವಿವಾದ. ಆದರೆ ಮಾಡಿದ ಉದ್ದೇಶ ಏನು! ಈ ಉದ್ದೇಶಕ್ಕೆ ಭಂಗ ತರತಕ್ಕಂತಹ ಕೆಲಸ ಸರಕಾರ ಮಾಡಿದೆ, ಕಳೆದ ಸಾರಿ ಅಧಿವೇಶನ 9 ದಿವಸ ಸೇರಿತ್ತು ಮಾರ್ಚ್ 21 ರಿಂದ 31ರವರೆಗೆ. ಆದರೆ ನಿಜವಾಗಿ ನಡೆದದ್ದು 9 ದಿವಸ. 2 ದಿವಸ ಜನರಲ್ ಬಜೆಟ್ ಮೇಲೆ ಚರ್ಚೆ ಮಾಡಿದೆವು, 30ನೇ ತಾರೀಖು ಮುಖ್ಯಮಂತ್ರಿಗಳು ಉತ್ತರ ಕೊಟ್ಟರು, ಸಭೆ ಮುಂದಕ್ಕೆ ಹೋಯಿತು. ಇದು ತಮ್ಮ ಕಾಲಾವಧಿ. ನಾವೂ ಕೂಡ ಅಲ್ಲಿ ಅಧ್ಯಕ್ಷರಾಗಿ ಕೆಲಸ ಮಾಡಿದ್ದೇವೆ. ಈ ರೀತಿಯಾಗಿ ಸಭೆಯನ್ನು ನಿಕೃಷ್ಟವಾಗಿ ಕಾಣುವುದು ಇದೆಯಲ್ಲ ಇದು ಸಭೆಗೆ ಸಲ್ಲತಕ್ಕಂತಹ ಗೌರವ ಅಲ್ಲ.

ಇದು ಗೌರವವಲ್ಲವೆಂದು ಹೇಳತಕ್ಕಂತಹ ಸ್ವಾತಂತ್ರ್ಯವಾದರೂ ನಮಗೆ ಇರಬೇಕು, ತಮಗೆ ಇರಬೇಕು. ಇದು ಗೌರವವೆಂದು ಹೇಳತಕ್ಕಂತಹ ಅಧಿಕಾರ ತಮಗೆ ಇರಬೇಕು. ಇದು ಸರಿಯಾದ ಕ್ರಮ ಅಲ್ಲ. 28 ದಿವಸದೊಳಗೆ ಅಥವಾ ಒಂದು ತಿಂಗಳೊಳಗೆ ಎಂದು ನಿಯಮಾವಳಿಯಲ್ಲಿ ಏನು ಅಳವಡಿಸಿದ್ದೇವೆ ಅದರ ಬಗ್ಗೆ ವಿಚಾರ ಮಾಡಬೇಕಾಗುತ್ತದೆ. ಅದಕ್ಕೇ ನಾನು ಅವತ್ತು ಹೇಳಿದ್ದೆ adjourn the House indicating the date ಎಂದು. ಮುಂದಿನ ತಾರೀಖನ್ನು ನಿಗದಿ ಪಡಿಸಿ ಸಭೆಯನ್ನು ಮುಂದೂಡಿ ಎಂದು ಹೇಳಿದ್ದೆ. ಆದರೆ ದುರ್ದೈವ ಅದು ಆಗಲಿಲ್ಲ.

ಶ್ರೀ ಕೆ.ಹೆಚ್. ರಂಗನಾಥ್ : ಆದರೆ ಹೋದ ಸಾರಿ ತಾವು ಮುನಿಸಿಕೊಂಡಿದ್ದಿರಿ.

ಶ್ರೀ ವಾಟಾಳ್ ನಾಗರಾಜ್ : ಸಭೆ ಯಾರನ್ನೂ ಮುನಿಸಿಕೊಂಡಿರಲಿಲ್ಲವಲ್ಲ. ಅವರು ನಾವೂ ಮುನಿಸಿಕೊಳ್ಳುವುದು ಬೇರೆ ವಿಚಾರ. ನೀವೂ ಅವರೂ ಮುನಿಸಿಕೊಳ್ಳುವುದು ಬೇರೆ ವಿಚಾರ. ಆದರೆ ಸಭೆ ಕರೆಯುವುದಕ್ಕೆ ಯಾರು ಅಡ್ಡಿ ಮಾಡಿದರು.

ಶ್ರೀ ಕೆ.ಹೆಚ್. ರಂಗನಾಥ್ : ಜನತಾದಳದವರು ಮುನಿಸಿಕೊಂಡಿದ್ದರು.

ಶ್ರೀ ಡಿ.ಬಿ. ಚಂದ್ರೇಗೌಡ : ನಾವೇಕೆ ಮುನಿಸಿಕೊಂಡೆವು ಎಂದು ತಮಗೂ ತಿಳಿದಿದೆ. ತಾವೂ ಕೂಡ ಅಧ್ಯಕ್ಷರಾಗಿ ಕೆಲಸ ಮಾಡಿದಂತವರು. ನಿಮ್ಮಿಂದ ನಾವು ಮಾರ್ಗದರ್ಶನ ನಿರೀಕ್ಷೆ ಮಾಡುವುದೇನೆಂದರೆ, ಈ ಸಭೆಗೆ ಅವಮಾನವಾಗುವ ರೀತಿಯಲ್ಲಿ ನಡೆದುಕೊಳ್ಳುವುದು ಬೇಡ.

ಶ್ರೀ ಕೆ.ಹೆಚ್. ರಂಗನಾಥ್ : 9 ದಿವಸವಾಯಿತೆಂದು ಹೇಳಿದಿರಲ್ಲ ಅದಕ್ಕೆ ಹೇಳಿದೆ

ಶ್ರೀ ಡಿ.ಬಿ. ಚಂದ್ರೇಗೌಡ : 9 ದಿವಸವಾಯಿತು, ಅದು ನಿಜವೇ. ನಾವು ಮುನಿಸಿಕೊಡಿದ್ದು ಬೇರೆ. ನೀವು ಸಭೆ ನಡೆಸಬಾರದೆಂದಿರಲಿಲ್ಲವಲ್ಲ. ನಾವು ಎಕೆ ಮುನಿಸಿ ಕೊಂಡಿದ್ದೆವು ಅಂದರೆ 7 ಜನ ರೈತರು ಕೊಲೆಯಾಗಿತ್ತು, ಅದರ ಬಗ್ಗೆ ನ್ಯಾಯಾಂಗ ತನಿಖೆ ಮಾಡಿ ಎಂದು ಹೇಳಿದ್ದೆವು. ಸದನ ಸಮಿತಿ ಮಾಡಿದಿರಿ, ಆದರೆ ಇದುವರೆಗೂ ಅದರ ವರದಿ ಬರಲಿಲ್ಲ. ದೇವರ ದಯೆಯಿಂದ ಯಾವ ಆಶ್ವಾಸನೆಗಳೂ ಜಾರಿಗೆ ಬರಲಿಲ್ಲ. ಈ ಸುಳಿನ ಪಟ್ಟಿಯೊಳಗೆ ನಾವೇಕೆ ಸೇರಿಕೊಳ್ಳಬೇಕೆನ್ನುವುದು ನನ್ನ ಕಳಕಳಿ. ನಾನು ಮನವಿ ಮಾಡುತ್ತೇನೆ. ನಾವು ನಿರ್ದಿಷ್ಟವಾಗಿ ಯಾವ ಉದ್ದೇಶ ಇಟ್ಟುಕೊಂಡು ಈ ಇಲಾಖಾ ಸಮಿತಿಗಳನ್ನು ರಚನೆ ಮಾಡಿದ್ದೇವೆ ಈ ಇಲಾಖಾ ಸಮಿತಿಗಳು ಕಾಲಕ್ಕೆ ಸರಿಯಾಗಿ ಸದನಕ್ಕೆ ಕೊಡತಕ್ಕಂತಹ ವರದಿ ಏನು ಇದೆ ಅದು ಕೊಡುವಂತಾಗಬೇಕು. ತಾವು ದೊಡ್ಡ ಮನಸ್ಸು ಮಾಡಿದಿರಿ. ಆದರೂ ವಿಧಿ ಇಲ್ಲದೆ ತಮಗೆ ವರದಿ ಒಪ್ಪಿಸಿದ್ದೇವೆ. ಇದು ಆಗಬಾರದು. ಹಾಗಾಗಿ ತಾವು ಏನಾದರೂ ನಿರ್ದೇಶನ ಕೊಡಬೇಕು. ಎಲ್ಲಾ ಮುಖಂಡರುಗಳನ್ನು ಕರೆಸಿ ಚರ್ಚೆ ಮಾಡಿ ಒಂದು ಅಭಿಪ್ರಾಯಕ್ಕೆ ಬರೋಣ.

12.40 ಪಿ.ಎಂ

+ ಶ್ರೀ ಹಾರ್ನಳ್ಳಿ ರಾಮಸ್ವಾಮಿ : ಮಾನ್ಯ ಅಧ್ಯಕ್ಷರೇ, ಯಾವ ವಿಷಯದ ಮೇಲೆ ಚರ್ಚೆಯನ್ನು ಶುರುಮಾಡಬೇಕು ಎನ್ನುವುದನ್ನು ತಾವು ನಿನ್ನೆಯ ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ತೀರ್ಮಾನವಾದ ರೀತಿಯಲ್ಲಿ ಯಾವುದನ್ನು ಮೊದಲು ತೆಗೆದುಕೊಳ್ಳಬೇಕು ಎಂದು ಮೂರು ವಿಷಯಗಳನ್ನು ಹೇಳಿದ್ದಾರೆ.

ಶ್ರೀ ಡಿ.ಬಿ. ಚಂದ್ರೇಗೌಡ : ಪರವಾಗಿಲ್ಲ, ನೀವು ನಿಯಮದ ಬಗ್ಗೆ ಮಾತನಾಡುತ್ತೀರಿ ಎಂದು ನನಗೆ ಈಗ ಗೊತ್ತಾಯಿತು.

ಶ್ರೀ ಹಾರ್ನಳ್ಳಿ ರಾಮಸ್ವಾಮಿ : ಹೌದು, ನಿಯಮದ ಬಗ್ಗೆ ತಾವೇ ಮಾತನಾಡುವುದು.

ಶ್ರೀ ಡಿ.ಬಿ. ಚಂದ್ರೇಗೌಡ : ನಿಮಗೆ ನಿಯಮ ಇದ್ದಿದ್ದರೆ ಈ ರೀತಿ ಶಾಸನಸಭೆ ಆಗುತ್ತಿರಲಿಲ್ಲ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ : ಅದನ್ನೆಲ್ಲಾ ಚರ್ಚೆ ಮಾಡೋಣ. ಅದಕ್ಕೆಲ್ಲ ಉತ್ತರ ಹೇಳುತ್ತೇನೆ. ನೀವು ಈ ಸದನ ಕರೆಯುವುದು ಏನು ಎನ್ನುವುದನ್ನು ಆ ವಿಷಯವನ್ನೇ ಮೊದಲು ತೆಗೆದುಕೊಳ್ಳುವುದಾದರೆ ಆ ವಿಷಯವನ್ನೇ ಚರ್ಚೆ ಮಾಡೋಣ. ಮಾನ್ಯ ಅಧ್ಯಕ್ಷರಿಗೆ ಮನವಿ ಮಾಡಿಕೊಳ್ಳುವುದೇನೆಂದರೆ, ಯಾವ ವಿಷಯವನ್ನು ಮೊದಲು ಇವತ್ತು ತೆಗೆದುಕೊಳ್ಳಬೇಕೋ ಅದನ್ನು ನಿರ್ಧಾರ ಮಾಡಿದರೆ ಅದರ ಬಗ್ಗೆ ಚರ್ಚೆ ಮಾಡೋಣ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ನಾವು ಈ ಪ್ರಶ್ನೆಯನ್ನು ಇವತ್ತು ಇಲ್ಲಿ ಪ್ರಸ್ತಾಪ ಮಾಡತಕ್ಕಂಥದ್ದು ವಿಶೇಷವಾಗಿ ಅವಶ್ಯಕತೆ ಇದೆ. ಕಾರಣ ಈ ಸದನ ಪ್ರಾರಂಭವಾದ ನಂತರ ವರದಿಯನ್ನು ನಾವು ಇಲ್ಲಿ ಮಂಡಿಸಿದ್ದೇವೆ. ತಾವೆಲ್ಲರನ್ನೂ ಕರೆದಿದ್ದೀರಿ. ವರದಿಯನ್ನು ಮಂಡಿಸಿದ್ದೇವೆ. ನೀತಿ ನಿಯಮಗಳ ಪ್ರಕಾರ ಶಾಸನಸಭೆಯಲ್ಲಿ ನಮ್ಮ ವರದಿಯನ್ನು ಮಂಡಿಸತಕ್ಕಂಥದ್ದು ಏನು ಇದೆ. ಅಸೆಂಬ್ಲಿಯಲ್ಲಿ ತಮ್ಮ ದೊಡ್ಡಸ್ತಿಕೆಯಿಂದ ನಾವೆಲ್ಲ ತಮಗೆ ಕೊಟ್ಟಿದ್ದೇವೆ. ಆದರೆ ಈ ಸಾರಿ ನಡೆದಂಥ ಆಯವ್ಯಯ ಚರ್ಚೆ ಒಂಭತ್ತು ದಿವಸ. ಯಾರು ಮುನಿಸಿಕೊಂಡಿರಬಹುದು, ಯಾರು ಹೊರಗೆ ಹೋಗಿರಬಹುದು, ಆದರೆ ಸಭೆಯನ್ನು ನಡೆಸತಕ್ಕಂಥ ವ್ಯವಸ್ಥೆ ಇದೆಯಲ್ಲ, ಈ ವ್ಯವಸ್ಥೆಯಲ್ಲಿ ಸರ್ಕಾರ ಈ ಸಭೆಯನ್ನು ದುರುಪಯೋಗಪಡಿಸಿಕೊಂಡಿದೆ ಎಂದು ನೇರವಾಗಿ ಆರೋಪಣೆ ಮಾಡುತ್ತಿದ್ದೇನೆ. ಕಾರಣ ತಮಗೆ ಹೇಳುತ್ತಿದ್ದೇನೆ. ಮೊನ್ನೆ ತಮಗೆ ಗೊತ್ತಿರಬಹುದು.

ಲೋಕಸಭೆಯಲ್ಲಿ ಆ ವರದಿ ಬರಲಿಲ್ಲ ಎಂದು ಇಡೀ ವಿರೋಧ ಪಕ್ಷ ಹೊರಗಡೆ ಇದ್ದರೂ ಕೂಡ ಸಭೆಯನ್ನು ಧಾರಾಳವಾಗಿ ನಡೆಸಿಕೊಂಡು ಹೋದರು. ಅಲ್ಲಿ ಸಭೆಗೆ ಲೋಪ ಬರಲಿಲ್ಲ. ಸಭೆ ನಡೆಸುವುದಕ್ಕೆ ಲೋಪ ತರಲಿಲ್ಲ. ಲೋಕಸಭೆಯಲ್ಲಿ ಕಾಲಕಾಲಕ್ಕೆ ಯಾವ ಗಳಿಗೆಯಲ್ಲಿ ಸಭೆಯನ್ನು ನಡೆಸಬೇಕು ಎನ್ನುವ ನಿರ್ಧಾರ ಇದೆ. ಇಲ್ಲಿ ಆ ನಿರ್ಧಾರ ಇಲ್ಲ. ನಮ್ಮ ರಾಜ್ಯದಲ್ಲಿ ಆ ನಿರ್ಧಾರ ಇಲ್ಲ. ಒಂದೊಂದು ಸರ್ಕಾರ ಬಂದಾಗ ಒಂದೊಂದು ನಿರ್ಧಾರ. ಒಬ್ಬೊಬ್ಬ ಮುಖ್ಯಮಂತ್ರಿಗಳು ಬಂದಾಗ ಒಂದು ನಿರ್ಧಾರ ಇದನ್ನು ತಾವು ಪರಿಶೀಲನೆ ಮಾಡಬೇಕು. ಹಿಂದಿನ ವರ್ಷಗಳಲ್ಲಿ ಎಷ್ಟೆಷ್ಟು ದಿನಗಳ ಕಾಲ ಈ ಸದನ ನಡೆದಿದೆ? ಮತ್ತು ಆಯವ್ಯಯದ ಬಗ್ಗೆ ಎಷ್ಟು ಚರ್ಚೆಯಾಗಿದೆ? ಇವತ್ತು ತಮಗೆ ಹೇಳುವುದಾದರೆ ಎರಡು ದಿವಸ ಆಯವ್ಯಯದ ಮೇಲೆ ಸಾಮಾನ್ಯ ಚರ್ಚೆ ನಡೆದು ಮೂರನೇ ದಿವಸ ನೇರವಾಗಿ ಮುಖ್ಯಮಂತ್ರಿಗಳು ಉತ್ತರ ಕೊಟ್ಟರು. ಅವರು ಮುನಿಸಿಕೊಂಡು ಹೋದರು. ಅದಾನಂತರ ವರದಿಯನ್ನು ಕೊಡಬೇಕು ಎಂದು ವಿಷಯ ಸಮಿತಿಗೆ ಒಪ್ಪಿಸುತ್ತಾರೆ. ವಿಷಯ ಸಮಿತಿಯ ವರದಿಯನ್ನು ಕೊಡತಕ್ಕಂಥ ಕಾಲ ನಾಲ್ಕು ವಾರಗಳು. ಕೊಡುವುದಕ್ಕೆ ನಾವೆಲ್ಲ ತಯಾರಾಗಿದ್ದರೆ ನಾವು ಯಾರಿಗೆ ಕೊಡಬೇಕು? ಇದು ಇರುವ ಪರಿಸ್ಥಿತಿ.

ಸಭೆಯ ಮುಂದೆ ಮಂಡಿಸಬೇಕು ಎಂದು ಹೇಳುವಂಥದ್ದು ಒಂದು ಭಾಗವಾದರೆ, ಮತ್ತೊಂದು ಭಾಗ ತಮಗೆ ಹೇಳತಕ್ಕಂಥದ್ದು ನಮ್ಮ ಹಕ್ಕು, ಶಾಸಕರ ಹಕ್ಕು, ಈ ಸದನವನ್ನು ಕರೆಯಬೇಕು, ಸದನದಲ್ಲಿ ಅನೇಕ ವಿಚಾರಗಳನ್ನು ಚರ್ಚೆ ಮಾಡಬೇಕು, ಕೇವಲ ಈ ಸದನವನ್ನು ನಿಮ್ಮ ಪಕ್ಷದ ಒಳಗಿನ ಒಂದು ಮನೆಯಾಗಿ ಮಾಡಿಕೊಳ್ಳುವುದಕ್ಕಾಗುವುದಿಲ್ಲ. ಈ ಪರಮ ಪವಿತ್ರವಾದಂಥ ಸದನವನ್ನು ಸರ್ಕಾರ ನಿಜವಾಗಿಯೂ ಧಿಕ್ಕರಿಸಿದೆ. ಸರ್ಕಾರ ಕಡೆಗಾಣಿಸಿದೆ ಎಂದು ನನ್ನ ಒಂದು ಆರೋಪ.

ಆದ್ದರಿಂದ ತಮ್ಮಲ್ಲಿ ನಾನು ಮನವಿ ಮಾಡುತ್ತೇನೆ, ಈ ಸದನದ ವ್ಯಕ್ತಿತ್ವವನ್ನು, ಎತ್ತರವನ್ನು ಉಳಿಸಬೇಕಾದ್ದು ನಮ್ಮ ಕರ್ತವ್ಯ. ಆ ದೃಷ್ಟಿಯಿಂದ ಸರ್ಕಾರದ ಕಡೆಯಿಂದ ಈ ಲೋಪದ ಬಗ್ಗೆ ಏನು ಉತ್ತರ ಕೊಡುತ್ತಾರೆ ಎಂದು ತಮ್ಮ ಮೂಲಕ ಅವರಿಂದ ನಿರೀಕ್ಷೆ ಮಾಡುತ್ತಿದ್ದೇನೆ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಿಗೆಲ್ಲಾ ತಿಳಿದಿರುವ ರೀತಿಯಲ್ಲಿ ಇದೇ ಸಭೆಯ ತೀರ್ಮಾನದಂತೆ ವಿಷಯ ಸಮಿತಿಗಳ ರಚನೆಯಾಯಿತು. ಮತ್ತು ಅದರ ಬಗ್ಗೆ ನಿಯಮಗಳನ್ನು ಮಾಡಿ ಆ ನಿಯಮಗಳನ್ನು ಕೂಡ ಈ ಸಭೆಯು ಒಪ್ಪಿ ಆ ಪ್ರಕಾರ ವಿಷಯ ಸಮಿತಿಗಳಾಯಿತು. ವಿಷಯ ಸಮಿತಿಗಳನ್ನು ಮಾಡುವ ಉದ್ದಿಶ್ಯ ಏನಿದೆ, ಈ ಸಭೆಯ ಉದ್ದಿಶ್ಯ ಏನಿತ್ತು ಎಂದರೆ, ಎಲ್ಲಾ ವಿಷಯಗಳನ್ನೂ ಈ ಸಭೆಯಲ್ಲಿ ಎಲ್ಲಾ ಸದಸ್ಯರು ಭಾಗವಹಿಸಿ ಚರ್ಚೆ ಮಾಡುವುದಕ್ಕೆ ಆಗುತ್ತಿಲ್ಲ. ಹಿಂದೆ ಯಾವ ವರ್ಷವೂ ಆಗಿಲ್ಲ. ಕೊನೆಯ ಹಂತದಲ್ಲಿ ತಾವು ಒಟ್ಟಾಗಿ ತೀರ್ಮಾನ ಮಾಡಿದ ರೀತಿಯಲ್ಲಿ ಈ ಪರಿಸ್ಥಿತಿಯಾಗಿದೆ. ಆದುದರಿಂದ ಈ ಸಭೆಯಲ್ಲಿ 225 ಜನ ಸದಸ್ಯರೂ ಕೂಡ ಪ್ರತಿಯೊಂದು ವಿಷಯಗಳ ಮೇಲೂ ಆಳವಾದಂಥ ಅಧ್ಯಯನ ಮಾಡಿ ಚರ್ಚೆ ಮಾಡಿ ವರದಿಗಳನ್ನು ಒಪ್ಪಿಸಬೇಕು ಎಂದು ಹೇಳಿ ಮಾಡಿದೆ. ಅದಕ್ಕೋಸ್ಕರ ಒಂದೂವರೆ ತಿಂಗಳು ಎರಡು ತಿಂಗಳು ಕಾಲ ಈ ವಿಷಯ ಸಮಿತಿಗಳಲ್ಲಿ ಎಲ್ಲರೂ ಸೇರಿ ಚರ್ಚೆ ಮಾಡಿ ತಮ್ಮ ವರದಿಗಳನ್ನು ಕೊಟ್ಟಿದ್ದಾರೆ. ಈ ಕೆಲಸಗಳೂ ಕೂಡ ಈ ಸಭೆಯ ಒಂದು ಭಾಗ ಎನ್ನುವುದು ಮಾನ್ಯ ಚಂದ್ರೇಗೌಡರಿಗೂ ಗೊತ್ತಿದೆ, ವಿರೋಧ ಪಕ್ಷದ ನಾಯಕರಿಗೂ ಮತ್ತು ಎಲ್ಲಾ ನಾಯಕರಿಗೂ ಗೊತ್ತಿದೆ. ಆದ್ದರಿಂದ ವಾಟಾಳ್ ನಾಗರಾಜ್‌ರವರು ಹೇಳಿದ ಹಾಗೆ, ಸಭೆಯನ್ನು ಧಿಕ್ಕರಿಸಿ ಇವೆಲ್ಲ ಮಾಡತಕ್ಕಂಥ ಪ್ರಶ್ನೆಯಿಲ್ಲ. ಈ ಸಭೆಯನ್ನು ಅಲ್ಪಾವಧಿಗೆ ಏತಕ್ಕೆ ಕರೆಯಲಾಯಿತು ಎಂದರೆ ಎಲ್ಲಾ ವಿಷಯಗಳ ಬಗ್ಗೆ ವಿಷಯ ಸಮಿತಿಯಲ್ಲಿ ವಿವರವಾದ ಚರ್ಚೆ ನಡೆದು ಒಂದು ಅಭಿಪ್ರಾಯ ಬಂದಾಗ ಸೂಕ್ಷ್ಮವಾಗಿ ಆ ವಿಷಯಗಳ ಮೇಲೆ ಇಲ್ಲಿ ಮಾತನಾಡುವ ಉದ್ದಿಶ್ಯ ಇತ್ತೇ ವಿನಹ ವಿಷಯ ಸಮಿತಿ ಮಾಡುವಾಗ ಬೇರೆ ಇನ್ನೇನೂ ಇರಲಿ. ಇಲ್ಲಿ ಪುನಃ ಬಹಳ ವಿಸ್ತಾರವಾದಂಥ ಚರ್ಚೆ ಮಾಡುವ ಅಭಿಪ್ರಾಯ ಇರಲಿಲ್ಲ.

ಅದು ಸಭೆಯ ಮತ್ತು ನಿಯಮಗಳ ಪ್ರಕಾರ ನಡೆದಿದೆ. ಈಗ ಪ್ರತಿಯೊಂದು ವರ್ಷ ಸದನ ಎಷ್ಟು ದಿವಸ ನಡೆದಿದೆ ಎನ್ನುವುದನ್ನು ತಮ್ಮ ಮುಂದೆ ಅರಿಕೆ ಮಾಡುವುದಾದರೆ, 1991ರಲ್ಲಿ 45 ದಿವಸಗಳು ನಡೆದಿವೆ. 1992ರಲ್ಲಿ 38 ದಿವಸ, 1993ರಲ್ಲಿ 53 ದಿವಸ ಸಭೆ ನಡೆದಿದೆ. 1994ರಲ್ಲಿ 31.3.94ರವರೆಗೆ 23 ದಿವಸ ನಡೆದಿದೆ, ಈಗ 10 ದಿವಸ ಒಟ್ಟು 33 ದಿವಸ ನಡೆದಿದೆ. ಆದ್ದರಿಂದ ಈ ವರ್ಷವೇ ಬಹಳ ಕಡಿಮೆ ದಿವಸ ನಡೆಯುವಂತಹ ವ್ಯವಸ್ಥೆ ಮಾಡಿದೆ ಎಂದು ಹೇಳುವುದು ಸರಿಯಲ್ಲ. ಸಭೆಯನ್ನು ಮನಸ್ಸಿಗೆ ಬಂದ ಹಾಗೆ ಕರೆಯುವುದು ಅಲ್ಲ. ಅವಶ್ಯಕ ಇದ್ದಾಗಲೆಲ್ಲ ಸರ್ಕಾರದ ಒಂದು ತಜ್ಞೆಯ ಆಧಾರದ ಮೇಲೆ according to best judgment of the Govt. ಅವಶ್ಯಕತೆ ಇದ್ದಾಗಲೆಲ್ಲ ಸಭೆಯನ್ನು ಕರೆದು ಮಾಡಿದೆ. ಆದ್ದರಿಂದ ಈ ಸಭೆಯನ್ನು ಉದ್ದಿಶ್ಯ ಪೂರ್ವಕವಾಗಿ ಕಡೆಗಣಿಸುತ್ತದೆ ಎನ್ನುವ ಮಾತು ಸರಿಯಲ್ಲ. ಈ ಸಭೆಯೇ ನಮ್ಮ ಸರ್ಕಾರದ ಆಧಾರ. ಸಭೆಯಲ್ಲಿಯೇ ನಾವು ಎಲ್ಲ ತೀರ್ಮಾನಗಳನ್ನು ತೆಗೆದುಕೊಳ್ಳಬೇಕು. ಇದೆಲ್ಲ ಅಂಶ ಮಾನ್ಯ ಹಿರಿಯ ಸದಸ್ಯರುಗಳಿಗೆ, ಎಲ್ಲ ಸದಸ್ಯರುಗಳಿಗೆ ಗೊತ್ತಾಗಿದೆ. ಆದ್ದರಿಂದ ಈ ಸಭೆಯ ಗೌರವಕ್ಕೆ ತಕ್ಕ ಹಾಗೆಯೇ ಸರ್ಕಾರ ನಡೆದಿದೆ. ಈಗ ಇರುವ ಅಂಶಗಳನ್ನು ಎಲ್ಲ ಚರ್ಚೆ ಮಾಡೋಣ. ಒಂದಲ್ಲ ಒಂದು ಕಾಲದಲ್ಲಿ ಕೆಲವರು, ನಾವು ನೀವು ಎಂದು

ಹೇಳುವುದಿಲ್ಲ. ಕೇವಲ ನೀವೇ ಮಾಡಿದ್ದೀರೆಂದು ಹೇಳುವುದಿಲ್ಲ, ನಾವೂ ಮಾಡಿದ್ದೇವೆ. ದುರದೃಷ್ಟವಶಾತ್ ಕೆಲವು ಕಾಲ ಸಭೆ ನಡೆಯದ ರೀತಿಯಲ್ಲಿ ಈ ವರ್ಷ ಅಂದರೆ 1993-94ರಲ್ಲಿ ಆಯಿತು. ಇದು ಆಗಬಾರದಿತ್ತು, ಆದರೆ ಸಿಟ್ಟಿನ ದಿಸೆಯಿಂದಲೋ ಅಥವಾ ಬೇರೆ ದಿಸೆಯಿಂದಲೋ ಆಗಿ ಹೋಯಿತು. ಆದ್ದರಿಂದ ಈ ವರ್ಷ ಸ್ವಲ್ಪ ವಿಧಾನ ಸಭೆಯ ಕಾರ್ಯಕಲಾಪಗಳನ್ನು ನಡೆಸೋಣ.

ಶ್ರೀ ವಾಟಾಳ್ ನಾಗರಾಜ್ : ನಿಮ್ಮ ಪಕ್ಷವೇ ಇದಕ್ಕೆ ಹೊಣೆ.

ಶ್ರೀ ಹಾರನ್ಹಳ್ಳಿ ರಾಮಸ್ವಾಮಿ : ನೀವು ಸೇರಿದ್ದೀರಿ ಸ್ವಾಮಿ....

(ಗೊಂದಲ)

ಶ್ರೀ ಹಾರನ್ಹಳ್ಳಿ ರಾಮಸ್ವಾಮಿ : ಎಲ್ಲರೂ ಸೇರಿದ್ದೀರಿ. ದಯವಿಟ್ಟು ಕೇಳಿ, ಈ ಸಭೆ ಸರಿಯಾಗಿ ನಡೆಯುವುದಕ್ಕೆ ನಿಯಮಗಳನ್ನು ನಿರ್ಲಕ್ಷಿಸುವುದಕ್ಕೆ ತಾವೂ ಸಹ ಭಾಗಿ ಆಗಿದ್ದೀರಿ.

ಶ್ರೀ ವಾಟಾಳ್ ನಾಗರಾಜ್ : ಈ ಪಾಪದ ಕೆಲಸಕ್ಕೆ ನೀವು ಹೊಣೆ. ಸದನವನ್ನು ತಪ್ಪು ದಾರಿಗೆ ಎಳೆದು ಈ ಸದನವನ್ನು ದುರುಪಯೋಗ ಮಾಡಿಕ್ಕೊಂಡಿದ್ದೀರಿ.

(ಗೊಂದಲ)

ಶ್ರೀ ಹಾರನ್ಹಳ್ಳಿ ರಾಮಸ್ವಾಮಿ : ತಾವು ಕೂಡ ನಿಯಮಗಳನ್ನು ಉಲ್ಲಂಘಿಸುವುದಕ್ಕೆ ಭಾಗಿ ಆಗಿದ್ದೀರಿ. ಆದ್ದರಿಂದ ದೋಷ ಒಂದೇ ಕಡೆ ಇದೆ ಎಂದು ಹೇಳುವುದಿಲ್ಲ. ಇದರಲ್ಲಿ ಯಾವ ದೋಷವನ್ನೂ, ತಪ್ಪನ್ನೂ ಮಾಡಿಲ್ಲ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ವೈ.ಕೆ. ರಾಮಯ್ಯ : ಕಾನೂನು ಸಚಿವರೇ, ಆಡಳಿತ ಪಕ್ಷದ ಸದಸ್ಯರು ಈ ಸಭೆಯ ನಡವಳಿಕೆಗಳನ್ನು ಪಡೆದಂತಹ ಚರಿತ್ರೆಯನ್ನು ಸೃಷ್ಟಿ ಮಾಡಿದವರು ನೀವು, ನಾವಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ : ಹಾಗಿದ್ದರೆ ನನ್ನ ಪ್ರಶ್ನೆ ನೇರವಾಗಿ, ಸರ್ಕಾರಕ್ಕೆ ಮತ್ತು ತಮಗೆ. ಕಳೆದ ಸಾರಿ ಮಾರ್ಚ್ 31ರಂದು ಅಡ್‌ಜರ್ನ್ ಆದಂತಹ ಅಧಿವೇಶನವನ್ನು ಒಂದು ತಿಂಗಳೊಳಗೆ ಕರೆಯಬೇಕಾದಂತಹ ನಿಯಮ ಇತ್ತು. ಅದನ್ನು ಯಾರು ಉಲ್ಲಂಘನೆ ಮಾಡಿದರು? ಅಷ್ಟು ಕೊಟ್ಟರೆ ಸಾಕು.

ಶ್ರೀ ಹಾರನ್ಹಳ್ಳಿ ರಾಮಸ್ವಾಮಿ : ಮಾನ್ಯ ಅಧ್ಯಕ್ಷರೆ, ಮೊದಲು ಒಂದು ತಿಂಗಳ ಒಳಗಾಗಿ ವರದಿಯನ್ನು ಕೊಡಬೇಕೆಂದು ಸೂಚಿಸಲಾಗಿತ್ತು. ಆದರೆ ಅನೇಕ ಸಮಿತಿಯ ಅಧ್ಯಕ್ಷರುಗಳು ಒಂದು ತಿಂಗಳ ಒಳಗೆ ಆಗುವುದಿಲ್ಲ, ಕಡೆಯ ಪಕ್ಷ ಆರು ವಾರಗಳು ಬೇಕು ಎಂದು ಹೇಳಿದರು. ಆದರೆ ವಾಸ್ತವಾಂಶ ಎಂದರೆ ಕೆಲವು ವರದಿಗಳು ಬಂದಿರಲಿಲ್ಲ. ಈ ಕಷ್ಟವನ್ನು ತಾವು ಅರ್ಥ ಮಾಡಿಕೊಳ್ಳಬೇಕೆಂದು ನಾನು ವಿನಯದಿಂದ ಕೇಳಿಕೊಳ್ಳುತ್ತೇನೆ. ಎರಡು ತಿಂಗಳು ಬಂದ ಮೇಲೆ ಸಮಿತಿಯ ವರದಿ ಅಧ್ಯಕ್ಷರಿಗೆ ತಲುಪಿದ ಮೇಲೆ ನಾವು ಸಭೆ ನಡೆಸಲು ತೀರ್ಮಾನ ಮಾಡಿದೆವು. ಮತ್ತೊಂದು ಮಾತು. ಪ್ರಥಮವಾಗಿ ನಮ್ಮ ಕರ್ನಾಟಕ ರಾಜ್ಯದಲ್ಲಿ ಈ ಒಂದು ಪ್ರಯೋಗವನ್ನು ನಡೆಸುತ್ತಿದ್ದೇವೆ. ಸ್ವಲ್ಪ ಲೋಪದೋಷಗಳು ಸಮಿತಿಯ ಕಾಲಾವಧಿಯಲ್ಲಿ ಆಗಬಹುದು, ಶಾಸನಸಭೆಯಲ್ಲಿ ಆಗಬಹುದು. ಲೋಪದೋಷಗಳನ್ನು ದೊಡ್ಡದು ಮಾಡಬಾರದು. ಈ ಅನುಭವದಿಂದ ಲೋಪದೋಷಗಳನ್ನು ಮುಂದಿನ ವರ್ಷ ಎಲ್ಲ ಸರಿ ಮಾಡುವ ಪ್ರಯತ್ನವನ್ನು ಮಾಡೋಣ.

ಅಧ್ಯಕ್ಷರು : ಸರಿ ಮಾಡಿಕೊಂಡು ಹೋಗೋಣ ಎಂದು ಹೇಳಿದ್ದಾರಲ್ಲ

+ ಪ್ರೊ : ಎಂ.ಡಿ. ನಂಜುಂಡಸ್ವಾಮಿ : ಇದೇ ವಿಷಯವಾಗಿ ಒಂದು ಮಾತನ್ನು ಹೇಳುತ್ತೇನೆ. ವಿಷಯ ಸಮಿತಿಗಳನ್ನು ನಾವು ಲಘುವಾಗಿ ತೆಗೆದುಕೊಳ್ಳುವುದಕ್ಕೆ

ಆಗುವುದಿಲ್ಲ ಎಂದು ತಾವು ಹೇಳುತ್ತಿದ್ದೀರಿ. ನಾನು ಈಗಾಗಲೇ ಹಿರಿಯ ಸದಸ್ಯರ ಜೊತೆ ಇದರ ಬಗ್ಗೆ ಸ್ವಲ್ಪ ಗಂಭೀರವಾಗಿ ಚರ್ಚೆ ಮಾಡಿ ಮುಂದಿನ ವರ್ಷ ಈ ವಿಷಯ ಸಮಿತಿಯ ವ್ಯವಸ್ಥೆ ಇಟ್ಟುಕೊಳ್ಳಬೇಕೋ ಬೇಡವೋ ಎನ್ನುವ ಬಗ್ಗೆ ಚರ್ಚೆ ಮಾಡುತ್ತಿದ್ದೆವು. ಏಕೆಂದರೆ ತಾವೇ ಹೇಳಿದಿರಿ. ಹಲವಾರು ಸಮಿತಿಗಳ ಅಧ್ಯಕ್ಷರು ಸಭಾಧ್ಯಕ್ಷರನ್ನು ಕಾಲಾವಕಾಶ ಕೇಳಿ ತೆಗೆದುಕೊಂಡಿದ್ದು ನಮಗೆಲ್ಲಾ ಗೊತ್ತು. ಇದು ಆಗಬಾರದು ಎಂದು ಸನ್ಮಾನ್ಯ ಚಂದ್ರೇಗೌಡರು ಹೇಳುತ್ತಿರುವುದು. ನಿಯಮದ ಪ್ರಕಾರ ಕೆಲಸ ನಡೆಯಬೇಕು. ಏಕೆಂದರೆ ಇದು ಆಯವ್ಯಯಕ್ಕೆ ಸಂಬಂಧಪಟ್ಟಂತಹ ವಿಷಯ ಸಮಿತಿ ಇದು. 4 ವಾರದೊಳಗೆ ವರದಿಯನ್ನು ಸದನಕ್ಕೆ ಕೊಡಬೇಕು, ಅನಂತರ ಅದರ ಬಗ್ಗೆ ಚರ್ಚೆ ನಡೆಯಬೇಕು. ಆ ಕಾರಣ ಈ ಆರೋಪ ಕೂಡ ಯಾವುದೇ ಆಡಳಿತ ಪಕ್ಷ ಇದ್ದರೂ ಬರಬಾರದು. ಆ ಕಾರಣ ನನ್ನ ಸಲಹೆ ಏನೆಂದರೆ ನೀವು ಏನು ಸಮಿತಿಗಳನ್ನು ರಚನೆ ಮಾಡುತ್ತೀರಿ, ಇದು ಲೋಕಸಭೆಯಲ್ಲೂ ಮಾಡುತ್ತಿರತಕ್ಕಂಥ ಒಂದು ಪದ್ಧತಿ ಇದೆ.

ಆದಷ್ಟು ಸಮಿತಿಗಳಿಗೆ ವಿರೋಧ ಪಕ್ಷದವರನ್ನು ಅಧ್ಯಕ್ಷರನ್ನಾಗಿ ಮಾಡಬೇಕು, ಇದು ಮೊದಲನೆಯದು, ಅನಂತರ ಕನಿಷ್ಟ ಮೂರನೆ ಒಂದು ಭಾಗ ವಿರೋಧ ಪಕ್ಷದ ಸದಸ್ಯರುಗಳಿರಬೇಕು. ಆಗ ನಿಮಗೆ ಈ ಆರೋಪ ಬರುವುದಿಲ್ಲ. ಇದರ ಬಗ್ಗೆ ದಯವಿಟ್ಟು ಆಲೋಚನೆ ಮಾಡಿ, ಇಲ್ಲದಿದ್ದರೆ ನನ್ನಂತಹವರಿಗೆ ಇಂಥ ವಿಷಯ ಸಮಿತಿಯ ವ್ಯವಸ್ಥೆಗಳನ್ನೇ ಮುಂದುವರಿಸಬೇಕೋ ಅಥವಾ ಕೈಬಿಡಬೇಕೋ ಎನ್ನತಕ್ಕ ಸಂಶಯ ಉಂಟಾಗುತ್ತದೆ.

ಶ್ರೀ ಡಿ.ಬಿ. ಚಂದ್ರೇಗೌಡ : ತಾವು ಅಧ್ಯಕ್ಷರು ಇದರ ಬಗ್ಗೆ ರೂಲಿಂಗ್‌ನ್ನು ಕೊಡಬೇಕಾಗುತ್ತದೆ. ಮುಂದೆ ಆ ರೀತಿಯಾಗುವುದಿಲ್ಲವೆಂದು ಇವರು ಹೇಳಿದ್ದಾರೆ. ಆದರೆ ಮುಂದೆ ಇವರು ಇರುವುದಿಲ್ಲ. ಇದೇ ಕೊನೆ, ಈ ಅಧಿವೇಶನವೇ ಕೊನೆ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ : ನಿಮ್ಮ ಹಗಲುಗನಸುಗಳಿಗೆ ನಾವೇನೂ ಹೇಳುವುದಿಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ : ನೀವು ಈ ಸದನಕ್ಕೆ ಬಂದಿಲ್ಲ, ಅಲ್ಲಿನ ಸದಸ್ಯರು ಇಲ್ಲಿಗೆ ಬಂದಿದ್ದೀರಿ. ತಾವು ಅದಕ್ಕೆ ಗಾಬರಿಯಾಗಬೇಡಿ. ನೀವು ಬರುವುದಿಲ್ಲ. ಆದರೆ ತಾವು ಬರುತ್ತೀರಿ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ : ನೀವು ಅಧಿಕಾರಕ್ಕೆ ಬರುತ್ತೀರಿ, ನಾವು ಬರುವುದಿಲ್ಲವೆಂದು ತಾವು ಏನು ಭಾವನೆಯನ್ನಿಟ್ಟುಕೊಂಡಿದ್ದೀರಿ ಅದು ಹಗಲು ಕನಸಾಗುತ್ತದೆ.

ಶ್ರೀ ಡಿ.ಬಿ. ಚಂದ್ರೇಗೌಡ : ನಾವು ಶಾಸನ ಸಭೆಗೆ ಬರುತ್ತೇವೆಂದು ಹೇಳಿದ್ದೇನೆ. ನಿಮಗೆ ಉತ್ತರವನ್ನು ಹೇಳಲು ಅಧಿಕಾರ ಸಿಗುತ್ತದೋ ಇಲ್ಲವೋ ಗೊತ್ತಿಲ್ಲ.

ಶ್ರೀ ಹಾರನಳ್ಳಿ ರಾಮಸ್ವಾಮಿ : ಮುಂದೆ ಏನಾಗುತ್ತದೋ ಅದನ್ನು ನಾವೂ ಕಂಡಿಲ್ಲ ನೀವು ಕಂಡಿಲ್ಲ. ನೀವು, ನಾವು ಇಬ್ಬರೂ ಚುನಾವಣೆಗೆ ನಿಲ್ಲಬಹುದು. ಆದರೆ ಏನಾಗುತ್ತದೋ ಹೇಳಲಾಗುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್ : ನೀವು ಬರುವುದಿಲ್ಲವೆಂದರೆ ನೀವು ವಿಧಾನ ಪರಿಷತ್‌ನಲ್ಲೇ ಇರುತ್ತೀರಿ, ನಿಮ್ಮ ಸರ್ಕಾರ ಬರುವುದಿಲ್ಲವೆಂದಷ್ಟೆ.

ಶ್ರೀ ಡಿ.ಬಿ. ಚಂದ್ರೇಗೌಡ : ನಿಮ್ಮ ಸರ್ಕಾರ ಏನು ಮಾಡುತ್ತಿದೆ ಎಂದರೆ, ಇನ್ನೂ 15 ವರ್ಷಗಳ ಕಾರ್ಯಕ್ರಮ ಘೋಷಣೆಯಾಗುತ್ತಿದೆ, ನಾವು ಆ ರೀತಿಯಾಗಿ ಹೇಳುವುದಿಲ್ಲ. ಜನವರಿ ತಿಂಗಳಿನಲ್ಲಿ ಚುನಾವಣೆಯನ್ನು ಮಾಡುತ್ತೇವೆಂದು ಹೇಳುತ್ತಿದ್ದೀರಿ. ನಾವು ಆ ರೀತಿ ಹೇಳುವುದಿಲ್ಲ. ನಮ್ಮ ಅಧಿಕಾರದ ಅವಧಿಯಲ್ಲಿ ಎಷ್ಟು ಇರುತ್ತದೊ

ಅಷ್ಟು ಮಾಡುತ್ತೇವೆಂದು ಹೇಳುತ್ತೇವೆ. ಆದ್ದರಿಂದ ಮಾರ್ಗದರ್ಶನ, ನಿರ್ದೇಶನ ಹೋಗದಿದ್ದರೆ ವಿಷಯ ಸಮಿತಿಗಳನ್ನು ಮಾಡಿ ಏನು ಪ್ರಯೋಜನ. ನಾವು ಎಷ್ಟು ಆಸಕ್ತಿಯಿಂದ ವಿಷಯ ಸಮಿತಿಗಳನ್ನು ಮಾಡಿದೆವೋ ಅದಕ್ಕೆ ಸಲ್ಲಬೇಕಾಗಿದ್ದ ಗೌರವ, ಬೆಲೆ ಸಲ್ಲುವುದಿಲ್ಲ. ಅದಕ್ಕಾಗಿ ನಾನು ತಮ್ಮಲ್ಲಿ ಪ್ರಾರ್ಥನೆ ಮಾಡುತ್ತಿದ್ದೇನೆ. ನಾವು ಏನು ಹೇಳಿದ್ದೇವೆಂದರೆ, Rule 229, Sub clause 1 : "Where the House has not fixed any time for the presentation of the report, the report shall be presented within one month of the date on which reference to the Committee was made." It says, 'shall be presented'.

We shall present the report provided the House is convened. "..provided that the House may at any time on a motion made, direct that the time for the presentation of the report by the Committee be extended to a date specified in the motion." There is no discretion left. We all take responsibility. Even the Speaker has no authority. This House has to extend. I would like to only prevail upon the Hon'ble Parliamentary Affairs Minister to know the background of this. The House has the authority. We cannot extend. Anyway, we have extended. We accept that. At least the House should know that the Speaker has taken a decision and the House is in agreement with that decision. At least to that extent it should be done.

ಶ್ರೀ ವಾಟಾಳ್ ನಾಗರಾಜ್ : ಅಧ್ಯಕ್ಷರೆ, ಇದರ ಬಗ್ಗೆ ತಮ್ಮ ಮಾರ್ಗದರ್ಶನವೇನು? ಮಾನ್ಯ ಸಂಸದೀಯ ಸಚಿವರೇನೇಳಿದ್ದಾರೆ ಅದರ ಬಗ್ಗೆ ತಮ್ಮ ಮಾರ್ಗದರ್ಶನವೇನು?

ಅಧ್ಯಕ್ಷರು : ಈಗ ತಪ್ಪಾಗಿದೆ, ಅದನ್ನು ಮುಂದೆ ಸರಿಮಾಡಿಕೊಂಡು ಹೋಗೋಣವೆಂದು ಹೇಳಿದ್ದಾರಲ್ಲ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಅವರು ಮುಂದಿನ ಚುನಾವಣೆಯಲ್ಲಿ ಬಂದರೆ ತಾನೆ ಸರಿಪಡಿಸುವುದು?

ಶ್ರೀ ಹಾರ್ನಳ್ಳಿ ರಾಮಸ್ವಾಮಿ : ಚುನಾವಣೆಯಾದಮೇಲೆ ಯಾರ್ಯಾರು ಬರುತ್ತಾರೋ ಯಾರ್ಯಾರು ಹೋಗುತ್ತಾರೋ ಅದರ ಬಗ್ಗೆ ಈಗ ಏಕೆ ಮಾತನಾಡುತ್ತೀರಿ?

ಶ್ರೀ ವಾಟಾಳ್ ನಾಗರಾಜ್ : ಇವತ್ತು ಅವರ ಪಕ್ಷದಲ್ಲಿ ಇಲ್ಲಿ ಕುಳಿತಿರತಕ್ಕ ಎಲ್ಲಾ ಸದಸ್ಯರಿಗೂ ಸೀಟ್ ಕೊಡುತ್ತೇವೆಂದು ಮುಖ್ಯಮಂತ್ರಿಗಳು ಹೇಳಿದ್ದಾರೆ. ಅದನ್ನು ಇವತ್ತು ತಾನೆ ಪ್ರಕಟಣೆ ಮಾಡಿದ್ದಾರೆ.

ಮುಖ್ಯಮಂತ್ರಿಗಳ ಕಛೇರಿಯಿಂದ ಬಂದ ಪತ್ರದ ಬಗ್ಗೆ

ಶ್ರೀ ಎಂ.ಎಸ್. ಪಾಟೀಲ್ : ನನಗೆ ಮಾನ್ಯ ಮುಖ್ಯಮಂತ್ರಿಗಳಿಂದ ಒಂದು ತಂತಿ ಬಂದಿದೆ. "To M.S. Patil, Nijalingappa Nagar, Raichur, Please send the number of active member and primary members enrolled by you on 9.8.94, along with the name of the village, taluka andthe district, immediately without fail to my residential address at Bangalore as it is required by AICC. M. Veerappa Moily, Leader of CLP, Cheif Minister, Govt. of Karnataka.

ಶ್ರೀ ವಾಟಾಳ್ ನಾಗರಾಜ್ : ಯಾವುದೋ ಯೋಚನೆಯಲ್ಲಿ ಇಲ್ಲಿರುವ 224 ಸದಸ್ಯರಿಗೂ ಇದನ್ನು ಕಳಿಸಿಕೊಟ್ಟುಬಿಟ್ಟಿದ್ದಾರೆ. ಎಲ್ಲೋ ಸರ್ಕಾರದ ಕಾರ್ಯದರ್ಶಿಯವರಿಗೆ ತಂತಿಯನ್ನು ಕಳಿಸಿ ಎಂದು ಹೇಳಿದ್ದಾರೆ. ಅವರು ಎಲ್ಲರಿಗೂ ಕಳಿಸಿಬಿಟ್ಟಿದ್ದಾರೆ.

ಶ್ರೀ ಎಂ.ಎಸ್. ಪಾಟೀಲ್ : ಇದನ್ನು ಯಾರಿಗೆ ಕಳಿಸಬೇಕು, ಯಾರಿಗೆ ಕಳಿಸಬಾರದು ಎನ್ನತಕ್ಕ ವಿವೇಚನೆ ಇರಬಾರದೆ? ಇದು ಸಿ.ಎಂ.ನ ಕಛೇರಿಯಿಂದ ಬಂದಿರತಕ್ಕ ತಂತಿ. ನಿಮ್ಮ ಪಕ್ಷದ ಕಾರ್ಯಕ್ರಮಗಳನ್ನು ಕಛೇರಿಯ ಮೂಲಕ ಮಾಡತಕ್ಕದ್ದು ಒಂದು ದೊಡ್ಡ ಅಪರಾಧ. ಇಲ್ಲಿ ಕಛೇರಿಯ ದುರುಪಯೋಗವಾಗಿದೆ. ನನಗೆ ಮುಖ್ಯಮಂತ್ರಿಗಳ ಕಛೇರಿಯಿಂದ ತಂತಿ ಬಂದಿದೆ, ಪಕ್ಷದ ಕಾರ್ಯಕ್ರಮಗಳನ್ನು ಮುಖ್ಯಮಂತ್ರಿಗಳ ಕಛೇರಿಯಿಂದ ಮಾಡುವುದು ಕಛೇರಿಯ ದುರ್ವ್ಯವಹಾರವಾಗುತ್ತದೆ. ಅದು ಮುಖ್ಯವಾದ ಪ್ರಶ್ನೆ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ : ಅದು ಯಾರಿಗೆ ಬಂದಿದೆ ಪತ್ರ? ಯಾರ ಹೆಸರಿಗೆ ಬಂದಿದೆ?

ಶ್ರೀ ಎಂ.ಎಸ್. ಪಾಟೀಲ್ : ಅದು ನನಗೇ ಬಂದಿದೆ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ : ಎಂ.ಎಸ್. ಪಾಟೀಲರು ಈ ಭಾಗದಲ್ಲೂ ಇದ್ದಾರೆ. ಅವರು ಈ ಕಡೆ ಇದ್ದಾರೆ. ನೀವ್ಯಾಕೆ ಅವರ ಪತ್ರವನ್ನು ತೆಗೆದುಕೊಂಡಿರಿ? ಬೇರೆಯವರಿಗೆ ಬರೆದ ಪತ್ರವನ್ನು ತೆಗೆದುಕೊಂಡು ಅವರು ಹೇಳುತ್ತಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ಒಟ್ಟಾರೆ ಮುಖ್ಯ ಮಂತ್ರಿಗಳ ಕಾರ್ಯಾಲಯದಿಂದ ಎಲ್ಲರಿಗೂ ನೇರವಾಗಿ ಇದನ್ನು ಕಳಿಸಿದ್ದಾರೆ.

ಶ್ರೀ ಎಂ.ಎಸ್. ಪಾಟೀಲ್ : ಮಾನ್ಯ ರಾಮಸ್ವಾಮಿಯವರೆ, ನಾನು ಬೇಜವಾಬ್ದಾರಿಯಿಂದ ಮಾತನಾಡುತ್ತಿಲ್ಲ, ಜವಾಬ್ದಾರಿಯಿಂದಲೇ ಮಾತನಾಡುತ್ತಿದ್ದೇನೆ. ನಿಮ್ಮಲ್ಲಿ ಒಬ್ಬರು ಎಂ.ಎಸ್. ಪಾಟೀಲ್ ಇರಬಹುದು, ನಮ್ಮಲ್ಲಿ ನಾನು ಒಬ್ಬ ಎಂ.ಎಸ್. ಪಾಟೀಲ್ ಇದ್ದೇನೆ. ಆದರೆ ವಿಳಾಸದಲ್ಲಿರತಕ್ಕದ್ದು ನಿಜಲಿಂಗಪ್ಪನಗರ, ರಾಯಚೂರ್ ಎಂದು, ರಾಯಚೂರಿನ ನಿಜಲಿಂಗಪ್ಪ ನಗರದಲ್ಲಿರುವ ಎಂ.ಎಸ್. ಪಾಟೀಲ್ ನಾನು. ಸಂಕೇಶ್ವರದಲ್ಲಿರತಕ್ಕ ಎಂ.ಎಸ್. ಪಾಟೀಲ್ ಬೇರೆ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ಸಂಕೇಶ್ವರದ ಮಲ್ಲಾರಿಗೌಡಪಾಟೀಲ್ ನಾನು, ಎಂ.ಎಸ್. ಪಾಟೀಲ್ ಅಲ್ಲ.

ಶ್ರೀ ಬಿ.ಹೆಚ್. ಬನ್ನಿಕೋಡ್ : ಮಾನ್ಯ ಅಧ್ಯಕ್ಷರೆ, ಇದನ್ನು ಮುಖ್ಯಮಂತ್ರಿಗಳು ಅಧಿಕೃತವಾಗಿ ದಾಖಲೆಯ ಮೂಲಕ ಒಪ್ಪಿಕೊಂಡಿದ್ದಾರೆ. ತಮ್ಮ ಕಛೇರಿಯನ್ನು ಪಕ್ಷದ ಕೆಲಸಗಳಿಗಾಗಿ ದುರಪಯೋಗಮಾಡಿಕೊಂಡಿರುವುದಾಗಿ ಒಪ್ಪಿಕೊಂಡಿದ್ದಾಗಿದೆ. ಅವರ ಅಧಿಕಾರ ದುರುಪಯೋಗ, ಸಾರ್ವಜನಿಕರ ಹಣದ ದುರುಪಯೋಗವಾಗಿದೆ.

ಶ್ರೀ ಎಂ.ಪಿ. ವೆಂಕಟೇಶ್ : ಅಧ್ಯಕ್ಷರೆ, ಮುಖ್ಯಮಂತ್ರಿಗಳು ಎಲ್ಲಿ ಒಪ್ಪಿದ್ದಾರೆ?

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೆ, ಹಿರಿಯ ಸಚಿವರಾದಂಥ ಮಾನ್ಯ ಹಾರ್ನಳ್ಳಿ ರಾಮಸ್ವಾಮಿಯವರು ಮುಂದೆ ಯಾರು ಈ ಮನೆಗೆ ಬರುತ್ತಾರೆ ಯಾರು ಈ ಮನೆಗೆ ಬರುವುದಿಲ್ಲ ಅದರ ಬಗ್ಗೆ ಇಲ್ಲಿ ಚರ್ಚೆ ಮಾಡುವುದು ಬೇಡವೆಂದು ಹೇಳಿದರು. ಅಧ್ಯಕ್ಷರೆ, ಅದರ ಬಗ್ಗೆ ಚರ್ಚೆಯನ್ನು ಇಲ್ಲಿ ಮಾಡಬೇಕಾಗುತ್ತದೆ. ಏಕೆಂದರೆ, ಚುನಾವಣೆಯಾದ ಮೇಲೆ ಇದರ ಬಗ್ಗೆ ಚರ್ಚೆ ಮಾಡಲು ಅವಕಾಶವಿಲ್ಲ. ಚುನಾವಣೆಯಲ್ಲಿ ಯಾರು ಬರುತ್ತಾರೆ, ಯಾರು ಬರುವುದಿಲ್ಲವೆಂದು ಗೊತ್ತಾಗುತ್ತದೆ. ಇವತ್ತು ಸರ್ಕಾರ ಯಾವ ರೀತಿ ಬೇಜಾವಾಬ್ದಾರಿಯಿಂದ ಹೋಗುತ್ತಿದೆ ಎಂಬ ಬಗ್ಗೆ ಎಂ.ಎಸ್. ಪಾಟೀಲರು ನಿದರ್ಶನವನ್ನು ಕೊಟ್ಟಿದ್ದಾರೆ. ಏಕೆಂದರೆ ತಾವು ನಮ್ಮ ಪಕ್ಷದ ಸದಸ್ಯರಿಂದ ಯಾವ ಉದ್ದೇಶಕ್ಕಾಗಿ ಈ ರೀತಿ ಮಾಹಿತಿಯನ್ನು ಪಡೆದುಕೊಳ್ಳಲು ಪ್ರಾರಂಭ ಮಾಡಿದ್ದೀರೋ ನಮಗೆ ಗೊತ್ತಾಗುತ್ತಿಲ್ಲ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ಮಾನ್ಯ ವಿರೋಧ ಪಕ್ಷದ ನಾಯಕರೇ ಮರಾಠಿಯಲ್ಲಿ ಒಂದು ಗಾದೆ ಮಾತಿದೆ, ಅದರಂತೆ ನೀವು ಬರುತ್ತೀರೋ, ಯಾರು ಬರುತ್ತಾರೋ ಎಂಬುದು ಗೊತ್ತಿಲ್ಲ. ಅದರ ಬಗ್ಗೆ ಏಕೆ ಮಾತನಾಡುತ್ತೀರಿ?

ಶ್ರೀ ವಾಟಾಳ್ ನಾಗರಾಜ್ : ಅವರು ಬರುತ್ತಾರೆಂದು ಕನಸು ಕಾಣುತ್ತಿರಬೇಕು.

ಶ್ರೀ ಆರ್.ವಿ. ದೇಶಪಾಂಡೆ : ಚುನಾವಣೆಯ ಫಲಿತಾಂಶವು ಬರುವವರೆಗೆ ಎಲ್ಲರೂ ಕನಸು ಕಾಣಬೇಕು. ಇದರ ಬಗ್ಗೆ ಯಾರಿಗೂ ಸಂದೇಹವಿಲ್ಲ. ಜನತಾದಳ ಬರಲಿ, ಕಾಂಗ್ರೆಸ್ ಬರಲಿ ಬಿಜೆಪಿ ಬರಲಿ ಯಾರು ಬರಬೇಕು ಎಂಬುದನ್ನು ಜನರು ತೀರ್ಮಾನ ಮಾಡುತ್ತಾರೆ.

ಅಧ್ಯಕ್ಷರು : ಈಗ ನಿಲುವಳಿ ಸೂಚನೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ಯಾರ್ಯಾರು ನಿಲುವಳಿ ಸೂಚನೆಗೆ ಕಳಿಸಿದ್ದಾರೆ ಎಂಬುದನ್ನು ದಯಮಾಡಿ ಸ್ವಲ್ಪ ಹೇಳಿ.

ಅಧ್ಯಕ್ಷರು : ನಿಲುವಳಿ ಸೂಚನೆಗೆ ಸದಸ್ಯರ ಹೆಸರು ಈ ರೀತಿ ಇದೆ, ಶ್ರೀ ಆರ್.ವಿ. ದೇಶಪಾಂಡೆ, ಪಿ.ಜಿ.ಆರ್. ಸಿಂಧ್ಯ, ವೈ.ಕೆ. ರಾಮಯ್ಯ, ಚಂದ್ರೇಗೌಡರು, ಬೈರೇಗೌಡರು, ವಾಟಾಳ್ ನಾಗರಾಜ್, ಶ್ರೀ ಯಡಿಯೂರಪ್ಪ, ಕೆ.ಎಸ್. ಈಶ್ವರಪ್ಪ ಮತ್ತು ಇತರರು.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, ಬರಗಾಲ ಮತ್ತು ನೆರೆಹಾವಳಿಯ ಬಗ್ಗೆ ನಾವು ಒಂದು ನಿಲುವಳಿ ಸೂಚನೆಯನ್ನು ಕೊಟ್ಟಿದ್ದೇವೆ.

ಅಧ್ಯಕ್ಷರು : ಅದನ್ನು ನಾಳೆ ತೆಗೆದುಕೊಳ್ಳುತ್ತೇವೆ. ಇವತ್ತು ಆಗಸ್ಟ್ 15 ರಂದು ಹುಬ್ಬಳ್ಳಿಯಲ್ಲಿ ಏನು ಘಟನೆಯಾಯಿತು ಅದರ ಬಗ್ಗೆ ನಿಲುವಳಿ ಸೂಚನೆಗೆ ನಿರ್ಣಯ ತೆಗೆದುಕೊಂಡಿದ್ದೇವೆ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ತಾವು ಮೊದಲೇ ಹೇಳಿದ್ದರೆ ನಾವು ನಮ್ಮ ಹೆಸರನ್ನೂ ಕೊಡುತ್ತಿದ್ದೆವು. ನಮಗೂ ಮಾತನಾಡಲು ಅವಕಾಶ ಕೊಡಬೇಕಾಗುತ್ತದೆ. ದಯಮಾಡಿ ನಮಗೂ ಸಹ ಮಾತನಾಡಲು ಅವಕಾಶ ಮಾಡಿಕೊಡಬೇಕಾಗಿ ವಿನಂತಿಸುವೆ.

ಅಧ್ಯಕ್ಷರು : ತಾವು ನಿಲುವಳಿ ಸೂಚನೆಯನ್ನು ಕಳಿಸಿದ್ದೀರ?

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ಇದರ ಬಗ್ಗೆ ಕಳುಹಿಸಿಲ್ಲ. ಅದು ನಮಗೆ ಗೊತ್ತಾಗಲಿಲ್ಲ. ಮೊದಲು ಬರಗಾಲದ ಬಗ್ಗೆ ಚರ್ಚೆ ಮಾಡುವುದನ್ನು ಬಿಟ್ಟು ಗೋಲಿಬಾರ್ ಆಗಿರುವ ಬಗ್ಗೆ ತೆಗೆದುಕೊಳ್ಳುತ್ತೀರೆಂದು ನಮಗೆ ಗೊತ್ತಾಗಲಿಲ್ಲ. ಗೋಲಿಬಾರನ್ನು ಯಾರೋ ಮಾಡಿದ್ದಾರೆ, ಅದನ್ನು ಇಲ್ಲಿ ಚರ್ಚೆ ಮಾಡುವುದು ನಮಗೆ ತಿಳಿದಿರಲಿಲ್ಲ. ಬಿಜೆಪಿಯವರು ಆಫೀಸ್ ಮೇಲೆಯೇ ಪಿರಂಗಿಯನ್ನು ಹಚ್ಚಿದವರು, ಈಗ ಈದ್ಗಾ ಮೈದಾನಕ್ಕೆ ಹೋಗಿದ್ದಾರೆ. ಅದಕ್ಕಿಂತ ಮುಖ್ಯವಾಗಿ ನೆರೆಹಾವಳಿಯ ಬಗ್ಗೆ ಮತ್ತು ಬರಗಾಲದ ಬಗ್ಗೆ ಚರ್ಚೆ ಮಾಡುವುದು ಮುಖ್ಯವಾಗಿತ್ತು.

ಅಧ್ಯಕ್ಷರು : ನಾಳೆ ತಮ್ಮ ವಿಷಯದ ಬಗ್ಗೆ ತೆಗೆದುಕೊಂಡಾಗ ಮಾತನಾಡಬಹುದಲ್ಲ.

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೆ, ಮಾನ್ಯ ಮಲ್ಲಾರಿಗೌಡ ಪಾಟೀಲರು ಹೇಳುತ್ತಿರುವುದನ್ನು ನಾನು ಸಂಪೂರ್ಣವಾಗಿ ಒಪ್ಪಿಕೊಳ್ಳುತ್ತೇನೆ. ಅತಿವೃಷ್ಟಿ ಮತ್ತು ಬರಗಾಲದ ವಿಚಾರ ಬಹಳ ಪ್ರಮುಖವಾದುದು. ಇದು ಬಹಳ ಜ್ವಲಂತ ಸಮಸ್ಯೆ. ನಾವು ತಮಗೆ ಒಂದು ನಿಲುವಳಿ ಸೂಚನೆಯನ್ನು ನಿನ್ನೆ ಕೊಟ್ಟಿದ್ದೇವೆ, ನಿನ್ನೆ ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಏನು ತೀರ್ಮಾನವಾಯಿತು ಅದರ ಪ್ರಕಾರ

ಅತಿವೃಷ್ಟಿ ಮತ್ತು ಬರಗಾಲದ ವಿಚಾರವನ್ನು ಚರ್ಚೆಗೆ ತೆಗೆದುಕೊಳ್ಳಬೇಕು. ಇವು ಬಹಳ ಜ್ವಲಂತ ಸಮಸ್ಯೆಗಳಾಗಿವೆ. ಇದರ ಬಗ್ಗೆ ನಾಳೆ ಸರ್ಕಾರದ ವತಿಯಿಂದ ಸ್ಟೇಟ್‌ಮೆಂಟ್ ಮಾಡುತ್ತೇವೆಂದು ಹೇಳಿದರು. ಇವತ್ತು ಮುಂಜಾನೆ ನಾನು ಈ ನಿಲುವಳಿ ಸೂಚನೆಯ ಬಗ್ಗೆ ಪ್ರಸ್ತಾಪ ಮಾಡಿದ್ದೇನೆ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, ಗೋಲಿಬಾರ್ ವಿಚಾರದಲ್ಲಿ ಕೂಡ ಚರ್ಚೆ ಮಾಡಲು ಎಲ್ಲಾ ಸದಸ್ಯರಿಗೂ ತಾವು ಅವಕಾಶವನ್ನು ಮಾಡಿಕೊಡಬೇಕಾಗುತ್ತದೆ. ಕೇವಲ ನಿಲುವಳಿ ಸೂಚನೆಯನ್ನು ಕಳುಹಿಸಿದವರಿಗೆ ಮಾತ್ರ ತಾವು ಅವಕಾಶ ಕೊಡುವುದು ಸರಿಯಲ್ಲ. ಏಕೆಂದರೆ ನಿಲುವಳಿ ಸೂಚನೆ ತಂದಿರತಕ್ಕದ್ದು ನಮಗೆ ಗೊತ್ತೇ ಇಲ್ಲ. ತಾವು ಎಲ್ಲರಿಗೂ ಅವಕಾಶವನ್ನು ಕೊಡಲೇಬೇಕು.

ಅಧ್ಯಕ್ಷರು : ಅದನ್ನು ನಾನು ಪರಿಶೀಲನೆ ಮಾಡುತ್ತೇನೆ.

ಪ್ರೊ : ಎಂ.ಡಿ. ನಂಜುಂಡಸ್ವಾಮಿ : ಮಾನ್ಯ ಮಲ್ಲಾರಿಗೌಡ ಪಾಟೀಲರು ಮೊನ್ನೆ ಆಗಸ್ಟ್ 15ನೇ ತಾರೀಖು ನಡೆದಿರತಕ್ಕ ಘಟನೆ ವಿಚಾರ ಎಲ್ಲರಿಗೂ ಸಂಬಂಧಪಟ್ಟಿದ್ದುದು ಆದ್ದರಿಂದ ನಿಲುವಳಿ ಸೂಚನೆಗೆ ಸಹಿ ಹಾಕಿದವರಿಗೆ ಮಾತ್ರ ಅವಕಾಶ ಕೊಡುವುದು ಬೇಡ, ಸದನದ ಎಲ್ಲ ಸದಸ್ಯರಿಗೂ ಅವಕಾಶ ಕೊಡಬೇಕೆಂದು ಕೇಳುತ್ತಿರುವುದು ಸರಿಯಾದುದು. ನಾನೂ ಕೂಡ ಇದನ್ನೇ ವಿನಂತಿ ಮಾಡಿಕೊಳ್ಳುತ್ತಿದ್ದೇನೆ.

ಅಧ್ಯಕ್ಷರು : ಆದ್ದರಿಂದಲೇ ಇದನ್ನು ನಾನು ಪರಿಶೀಲನೆ ಮಾಡುತ್ತೇನೆಂದು ಹೇಳಿದೆನಲ್ಲಾ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, ತಾವು ತಕ್ಷಣ ಹೇಳಿದರೆ ನಾವೂ ಕೂಡ ಮಾತನಾಡಲು ಸಿದ್ಧವಾಗುತ್ತೇವೆ. ನೀವು ಈಗ ಬರಗಾಲದ ವಿಚಾರವನ್ನು ತೆಗೆದುಕೊಳ್ಳುತ್ತೀರೋ ಅಥವಾ ನೆರೆ ಹಾವಳಿ ವಿಚಾರವನ್ನು ತೆಗೆದುಕೊಳ್ಳುತ್ತೀರೋ ಎಂದು ಯೋಚನೆ ಮಾಡುತ್ತಿದ್ದೇವೆ. ವಿರೋಧಪಕ್ಷದ ನಾಯಕರು ನಿಲುವಳಿ ಸೂಚನೆಯನ್ನು ಕೊಟ್ಟಿರತಕ್ಕದ್ದು ನಮಗೆ ಗೊತ್ತಿರಲಿಲ್ಲ. ಅದನ್ನು ತಾವು ತಕ್ಷಣ ತೆಗೆದುಕೊಳ್ಳುತ್ತೀರೆಂದು ನಮಗೆ ಗೊತ್ತಿರಲಿಲ್ಲ.

ತಾವು ನಮಗೂ ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಮಾನ್ಯ ನಂಜುಂಡಸ್ವಾಮಿಯವರೂ ಕೂಡ ಇದೇ ಮಾತನ್ನೇ ಹೇಳಿದರು. ಈಗ ತಾವು ಇದನ್ನು ಪರಿಶೀಲನೆ ಮಾಡುತ್ತೇವೆಂದರೆ ನಾವು ಏನು ಹೇಳಬೇಕು.

ಅಧ್ಯಕ್ಷರು : ತಾವು ಸ್ವಲ್ಪ ತಡೆದುಕೊಳ್ಳಬೇಕು.

ನಿಲುವಳಿ ಸೂಚನೆ

ಹುಬ್ಬಳ್ಳಿಯ ಈದ್ಗಾ ಮೈದಾನದಲ್ಲಿ ನಡೆದ ಗೋಲಿಬಾರ್

+ ಶ್ರೀ ಆರ್.ವಿ. ದೇಶಪಾಂಡೆ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ಹುಬ್ಬಳ್ಳಿಯ ವಿವಾದಿತ ಪ್ರದೇಶದಲ್ಲಿ ಆಗಸ್ಟ್ 15ರಂದು ಒಂದು ರಾಷ್ಟ್ರೀಯಪಕ್ಷ ಮತ್ತು ಅದರ ಅಂಗ ಸಂಸ್ಥೆಗಳು ರಾಷ್ಟ್ರಧ್ವಜವನ್ನು ಹಾರಿಸುವ ನೆಪದಲ್ಲಿ ಹುಬ್ಬಳ್ಳಿ ನಗರದಲ್ಲಿ ಉಂಟಾದ ಪ್ರಕ್ಷುಬ್ಧ ವಾತಾವರಣದಲ್ಲಿ ಪೋಲೀಸರು ಗೋಲಿಬಾರ್ ಮಾಡಿದ್ದರಿಂದ 6 ಜನ ಅಮಾಯಕರು ಬಲಿಯಾದುದರ ಬಗ್ಗೆ ನಾವು ಈಗಾಗಲೇ ಒಂದು ನಿಲುವಳಿ ಸೂಚನೆಯನ್ನು ಕೊಟ್ಟಿದ್ದೇವೆ. ಆದರೆ ಈಗ ಇಲ್ಲಿ ಮಾನ್ಯ ಮುಖ್ಯಮಂತ್ರಿಗಳು ಇಲ್ಲ. ಸರ್ಕಾರ ಈ ವಿಚಾರವನ್ನು ಎಷ್ಟು ಲಘುವಾಗಿ ತೆಗೆದುಕೊಳ್ಳುತ್ತಿದೆ ಎಂಬುದನ್ನು ತಾವೇ ಯೋಚನೆ ಮಾಡಿ. ಮಾನ್ಯ ಚೌಡರೆಡ್ಡಿಯವರು ಹೋಂ ಮಿನಿಸ್ಟರ್ ಅಲ್ಲ. ಆದರೆ ಹೋಂ ಮಿನಿಸ್ಟರ್‌ರವರ ಪೋರ್ಟ್ ಫೋಲಿಯೋವನ್ನು